ಶ್ರೀ ಎಸ್. ಬಂಗಾರಪ್ಪ.—ಅವರ ಚರಿತ್ರೆ ಹೇಳುವುದಕ್ಕೆ ಹೋದರೆ ಬಹಳ ಅನಾಧ್ಯ ವಾಗುತ್ತದೆ. ಬರೀ ಅವರಿಗೆ ಸಂಬಂಧಪಟ್ಟಹಾಗೆ ಸೀಮೆಯೆಣ್ಣೆ ವಿಷಯವಾಗಿ ಮಾತ್ರ ಈಗ ಹೇಳುತ್ತೇವೆ.

ಅಧ್ಯಕ್ಷರು.—ನುಮ್ಮನೆ ಅವರ ಚರಿತ್ರೆ ಇಲ್ಲಿ ಏಕೆ ಬೇಕು ? ಅವರ ಚರಿತ್ರೆ ಬಗ್ಗೆ ನಂಬಂಧ ನಮಗೂ ಇಲ್ಲ, ನಮಗೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ನಮಗೆ ಇದೆ. ಅವರು ಬ್ಲಾಕ್‌ಮಾರ್ಕೆಟಿಯರ್. ಅವರು ಲೈಸೆನ್ಸ್ ತೆಗೆದುಕೊಂಡಿಲ್ಲ. ಅವರು ಮಾನ್ಯ ಮುಖ್ಯಮಂತ್ರಿಗಳ ಆಪ್ತರು.

Statement by the Minister of State for Food and Civil Supplies

re : *Shartage of Kerosene*

† ಶ್ರೀಮತಿ ಇ. ಇ. ವಾಜ್. (ಆಹಾರ ಮತ್ತು ನಿತ್ಯೋಪಯೋಗಿ ಶಾಖೆಗಳ ರಾಜ್ಯ ಮಂತ್ರಿಗಳು).—ಈಗ ನಮ್ಮ ಮಾನ್ಯ ಸದಸ್ಯರು ಅನೇಕರು ಏನೋ ಒಂದು ಅಪಾದನೆಯನ್ನು ತಂದರು. ಅದರ ಬಗ್ಗೆ ನಾನು ಹೇಳುವುದಾದರೆ ಮಾನ್ಯ ಶ್ರೀ ಕೆ. ಕೆ. ಮೂರ್ತಿಯವರು ಒಬ್ಬರೇ ಏಜೆಂಟಲ್ಲ. ಅಂತಹವರು 11 ಜನರು ಇದ್ದಾರೆ. ಅವರಿಗೆ ಲೈಸೆನ್ಸ್ ಕೊಟ್ಟಿದ್ದು ಹಿಂದಿನ ಸರ್ಕಾರ. ನಾವು ಕೊಟ್ಟಿದ್ದಲ್ಲ. ಈಗ ಸೀಮೆಯೆಣ್ಣೆ ಅಭಾವ ಏನಿದೆಯೋ ಅದು ನಿಜವಾಗಿಯೂ ಇವತ್ತು ಒಂದು ದಿವಸ ಬಿಟ್ಟರೆ ನಂತರ ತೊಂದರೆಯಾಗರಾರದು. ಹಿಂದಿನ ತಿಂಗಳಲ್ಲಿ 29ನೇ ಮತ್ತು 30ನೇ ತಾರೀಖಿನಂದು ಸಾಕಷ್ಟು ವ್ಯಾಗನ್‌ಗಳು ಬರಲಿಲ್ಲ. ಅದರಿಂದ ಆ ಎರಡು ದಿವಸಗಳು ಸ್ವಲ್ಪಮಟ್ಟಿಗೆ ತೊಂದರೆಯೇನೋ ಆಯಿತು. ನಾನೇ ಡಿಪೋಗೆ ಹೋಗಿ 24 ತಾಸುಗಳವರೆಗೆ ಖುದ್ದಾಗಿ ಈ ವಿಚಾರವಾಗಿ ಗಮನಕೊಟ್ಟಿದ್ದೇನೆ. ಜನರಿಗೆ ಇರತಕ್ಕ ತೊಂದರೆಯನ್ನು ಅದಷ್ಟು ಮಟ್ಟಿಗೆ ಜಾಗ್ರತೆಯಾಗಿ ನಿವಾರಿಸಬೇಕೆಂಬ ದೃಷ್ಟಿಯಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತವಾಗಿ ಸಲಹೆಗಳನ್ನು ಕೊಟ್ಟಿದ್ದೇನೆ. ಆದರೂ ಅನೇಕರಿಗೆ ವ್ಯಾನ್ ಬಂತು, ಸೀಮೆಯೆಣ್ಣೆ ಬರಲಿಲ್ಲವೆಂದು ಭಯ ಬಂತು. ಅದು ಸಹಜ. ಈ ರೀತಿ ಯಾವಾಗಲೂ ಆಗಿಲ್ಲ. ಇಷ್ಟು ತೊಂದರೆಯಾಗುವುದಕ್ಕೆ ಒಂದು ಮುಖ್ಯ ಕಾರಣವೇನೆಂದರೆ, ಸಾಮಾನ್ಯವಾಗಿ ಕೇವಲ 5 ಲೀಟರುಗಳನ್ನು ಕೊಳ್ಳುವವರು ನುಮಾರು 40–50 ಲೀಟರುಗಳನ್ನು ಕೊಳ್ಳುತ್ತಿದ್ದಾರೆ. ಮನೆಯಲ್ಲಿ 8–10 ಜನಗಳಿದ್ದರೆ ಅವರೆಲ್ಲರನ್ನೂ ಕ್ಯೂನಲ್ಲಿ ನಿಲ್ಲಿಸಿ ಪಡೆಯುತ್ತಿರುವುದು ಜಾಸ್ತಿಯಾಗಿದೆ. ಯಾರಾದರೂ ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರಿದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕೆಂದು ಆ ಅಧಿಕಾರಿಗಳ ಫೋನ್ ನಂಬರನ್ನೂ ಸಹ ತಿಳಿಸಲಾಗಿದೆ. ಎರಡು ಮೂರು ದಿವಸಗಳಲ್ಲಿ ಇದು ನರಿಹೋಗುತ್ತದೆ. ಯಾರೇ ಆಗಲೀ ಅದನ್ನು ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರುತ್ತಿದ್ದರೆ, ಅಂತಹ ವಿಷಯ ಸರ್ಕಾರದ ಗಮನಕ್ಕೆ ಬಂದರೆ ನಾವು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆಂಬ ಭರವಸೆಯನ್ನೂ ಸಹ ಕೊಟ್ಟಿದ್ದೇನೆ. ಇವೊತ್ತು 6 ಘಂಟೆಗೆ ಟ್ರೈನ್ ಬರಬೇಕಾಗಿತ್ತು. ಡಿಲೇ ಆಯಿತು. 11 ಘಂಟೆಗೆ ಇಲ್ಲಿಗೆ ಬರಬೇಕಾಗಿತ್ತು. ಟ್ರೈನು ಮಾಲೂರಿನಲ್ಲಿಯೇ ನಿಂತುಹೋಗಿದೆ. ರೈಲುಕಂಬಿ ಹಾದಿ ರಿಪೇರಿ ಮಾಡುವ ಸಲುವಾಗಿ ಒಂದು ಘಂಟೆ ಕಾಲ ರೈಲು ಹೊತ್ತಾಗಿ ಬರುತ್ತದೆಂದು ಹೇಳಿದ್ದಾರೆ. ಐ. ಓ. ಸಿ. ಅವರು ನಮಗೆ ಸೀಮೆಯೆಣ್ಣೆಯನ್ನು ಕೊಚ್ಚಿನ್‌ನಿಂದ ಹಾಗೂ ಮಂಗಳೂರಿನಿಂದ ಕಳುಹಿಸುತ್ತಾರೆ. ಕೊಚ್ಚಿನ್ ರಿಫೈನರಿಯಿಂದಲೂ ನಮಗೆ ಸಪ್ಲೈ ಯಾವಾಗ ಬರುತ್ತದೆಂಬುದನೂ ಸಹ ತಿಳಿಸಲ್ಲಲ್ಲ. ಅವರೂ ನಮಗೆ ಒದಗಿಸಬೇಕು. ಮಾನ್ಯ ಸದಸ್ಯರು ಹೇಳಿದ ಪ್ರಕಾರ ಕೆಲವರು ಲೈಸೆನ್ಸ್ ಇಲ್ಲದೆ ಮಾರುತ್ತಿದ್ದರೆಂಬ ಬಗ್ಗೆ ವಿಚಾರಮಾಡಲಾಗುತ್ತದೆ. ಸೀಮೆಯೆಣ್ಣೆ ನಮಗೆ ಬೇಕಾದಷ್ಟು ಇರುವಾಗ, ಯಾರು, ಯಾವಾಗ ಹೇಗೆ ಮಾರುತ್ತಾರೆಂಬುದನ್ನು ಸಾಮಾನ್ಯವಾಗಿ ಗಮನಕೊಡುವುದಿಲ್ಲ. ಇಂಥಾದ್ದು ಯಾವುದಕ್ಕೂ ಹೆಚ್ಚಿಗೆ ಗಮನಕೊಡುವುದಕ್ಕಾಗುವುದಿಲ್ಲ. ಈಗ ಅಭಾವ ಬಂದದ್ದರಿಂದ, ಅವರು ಹಾಗೆ ಮಾಡಿದರು ಇವರು ಹೀಗೆ ಮಾಡಿದರೆಂದು ಹೇಳುತ್ತಾರೆ. ಸಾಮಾನ್ಯವಾಗಿ ಹೇಳುವುದಾದರೆ ಲೈಸೆನ್ಸ್ ಇಲ್ಲದೆ ಮಾರುವುದು ತಪ್ಪು. ಆ ರೀತಿ ಮಾರುತ್ತಿರುವುದನ್ನು ಕೂಡಲೇ ನಿಲ್ಲಿಸಬೇಕೆಂದು ಸೂಚನೆ ಕೊಟ್ಟಿದೆ. ಸೀಮೆಯೆಣ್ಣೆಯನ್ನು ಮಾರುವವರು ಯಾವಾಗಲೂ ಲೈಸೆನ್ಸ್ ಪಡೆದಿರಬೇಕು. ಆ ರೀತಿ ಲೈಸೆನ್ಸ್ ಪಡೆದಿರುವವರೆಲ್ಲರೂ ಅದನ್ನು ನಮ್ಮ ಕಾರ್ಪೊರೇಷನ್ ಎಲ್ಲೆಯೊಳಗೇ ಮಾರಬೇಕು. ಏಜೆಂಟ್ ಬೇಕಾದಷ್ಟು ನಮ್ಮಲ್ಲಿ ಸಾಕಷ್ಟು ಸ್ಟಾಕ್ ಇಲ್ಲದೇ ಇದ್ದುದರಿಂದ ಈಗ ಸ್ವಲ್ಪ ತೊಂದರೆಯಾಯಿತು. ಅದಷ್ಟು ಜಾಗ್ರತೆಯಾಗಿ ಸೀಮೆಯೆಣ್ಣೆಗೆ

(ಶ್ರೀಮತಿ ಇ. ಇ. ವಾಜ್)

ಇರತಕ್ಕ ಅಭಾವವನ್ನು ಹೋಗರಾಡಿಸುವುದಕ್ಕೆ ಎಲ್ಲ ಪ್ರಯತ್ನಗಳನ್ನು ಸರಕಾರದವರು ಈಗಾಗಲೇ ಮಾಡುತ್ತಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾನು ಇಷ್ಟು ಹೇಳಿದ ಮೇಲೆ ಮಾನ್ಯ ಸದಸ್ಯರೆಲ್ಲರೂ ಈಗ ಸಮಾಧಾನ ಮಾಡಿಕೊಳ್ಳಬಹುದೆಂದು ನನಗನಿಸುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಆ ವ್ಯಾಗನ್ ಸಿಕ್ ವ್ಯಾಗನ್ ಎಂಬುದಾಗಿ ಏಜೆಂಟ್ ಮತ್ತು ರೈಲ್ವೆ ಸಿಬ್ಬಂದಿಯವರು ಹೇಳಿದ್ದು.....

ಶ್ರೀ ವಾಟಾಳ್ ನಾಗರಾಜ್.—ಇವರು ಆಹಾರ ಸಚಿವರಾದಮೇಲೆ ಈಗ ಸಕ್ಕರೆಗೆ ಸ್ಕೇರ್ಸಿಟಿ ಇದೆ. ಜೈರ್‌ಗೆ ಸ್ಕೇರ್ಸಿಟಿ ಇದೆ, ಸೀಮೆಯೆಣ್ಣೆಗೆ ಸ್ಕೇರ್ಸಿಟಿ ಇದೆ. ನಾಳೆ ಉಪ್ಪಿಗೂ ಅಭಾವ ಬರುತ್ತದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇವರ ಪೋರ್ಟ್‌ಫೊಲಿಯೋವನ್ನು ಚೇಂಜ್ ಮಾಡಿದರೆ ಬಹಳ ಒಳ್ಳೆಯದು. ಅವರಿಗೆ ಏನಾದರೂ ಬೇರೆ ಪೋರ್ಟ್‌ಫೊಲಿಯೊ ಕೊಡುವುದು ಒಳ್ಳೆಯದು.

2-30 P.M.

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೇ, ಈಗ ಬೇಬಿ ಫುಡ್ ಸಿಗುತ್ತಾ, ಇಲ್ಲ. ಅದನ್ನು ಬ್ಲಾಕ್‌ಮಾರ್ಕೆಟ್ಟಿನಲ್ಲಿ ಮಾರುತ್ತಿದ್ದಾರೆ. ಅದರ ಬಗ್ಗೆ ಸರ್ಕಾರದವರು ಜಾಗ್ರತೆಯಾಗಿ ಕ್ರಮ ತೆಗೆದುಕೊಳ್ಳಬೇಕು. ಈ ವಿಚಾರದಲ್ಲಿ ಮಂತ್ರಿಗಳು ಉತ್ತರ ಹೇಳಬೇಕು.

Mysore (Bombay and Hyderabad Areas) Religious and Charitable Inams Abolition Bill, 1972

Motion to Consider

(Debate Continued)

ಅಧ್ಯಕ್ಷರು :—ಈಗ 'ದಿ ಮೈಸೂರು (ಬಾಂಬೆ ಮತ್ತು ಹೈದ್ರಾಬಾದ್ ಪ್ರದೇಶಗಳಲ್ಲಿ) ರಿಲಿಜಿಯಸ್ ಮತ್ತು ಧಾರಿಟೆಬಲ್ ಇನಾಂ ಅಬಾಲಿಷನ್ ಬಿಲ್ 1972 ಇದರ ಮೇಲೆ ಚರ್ಚೆ ಪ್ರಾರಂಭವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೆ : ಮಾನ್ಯ ರೆವಿನ್ಯೂ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ಹೈದ್ರಾಬಾದ್ ಮತ್ತು ಮುಂಬೈ ಪ್ರದೇಶಗಳಿಗೆ ಸಂಬಂಧಪಟ್ಟ ರಿಲಿಜಿಯಸ್ ಮತ್ತು ಧಾರಿಟೆಬಲ್ ಇನಾಂ ರದ್ದಿಯಾತಿ ಮಸೂದೆಯನ್ನು ಸಭೆಯ ಮುಂದೆ ಮಂಡಿಸುವುದಕ್ಕೆ ಪೂರ್ವಭಾವಿಯಾಗಿ ಅವರು ಇದನ್ನು ಸುಧೀರ್ಘವಾಗಿ ಪರಿಶೀಲನೆ ಮಾಡಿ ಇದನ್ನು ತಂದಿಲ್ಲ ಅನ್ನುವುದು ನನಗೆ ಈ ಮಸೂದೆಯನ್ನು ಓದಿದ ಮೇಲೆ ಗೊತ್ತಾಯಿತು. ಹಳ್ಳೇ ಮೈಸೂರಲ್ಲಿ ಈಗಾಗಲೇ ಇಂಥಾ ಒಂದು ಕಾನೂನು ಜಾರಿಯಲ್ಲಿದೆ. ಇಲ್ಲ ಅದು 1955 ರಲ್ಲೇ ಜಾರಿಗೆ ಬಂದಿತ್ತು. ಹಾಗೆ ಇಲ್ಲ ಒಂದು ಕಾನೂನು ಈಗಾಗಲೇ ಜಾರಿಯಲ್ಲಿದ್ದರೂ ಮತ್ತೆ ಈಗ ಈ ಒಂದು ಹೊಸ ಬಿಲ್ಲನ್ನು ತರತಕ್ಕ ಅಗತ್ಯವಾದರೂ ಏನಿತ್ತು ಎಂದು ಕೇಳುತ್ತೇನೆ? ಹಾಲಿ ಇದ್ದ ಕಾನೂನಿಗೇ ಒಂದು ತಿದ್ದುಪಡಿಯನ್ನು ತಂದಿದ್ದರೆ ಸಾಕಾಗುತ್ತಿತ್ತು. ಹೋಗಲಿ ಈಗ ಹೊಸದಾಗಿ ಈ ಒಂದು ಮಸೂದೆಯನ್ನು ತಂದಿದ್ದಾರೆ. ತರಲಿ. ಇದರ ಬಗ್ಗೆ ನನ್ನ ಅಭ್ಯಂತರವೇನೂ ಇರುವುದಿಲ್ಲ. ಆದರೆ ಒಂದು ಸಮಗ್ರವಾದ ಭೂಸುಧಾರಣೆಯನ್ನು ಜಾರಿಗೆ ತರತಕ್ಕ ಸನ್ನಿವೇಶ ಬಹಳ ಹತ್ತಿರದಲ್ಲೇ ಇದ್ದಾಗ ಈವಿಷಯವನ್ನೂ ಅದರಲ್ಲೇ ಅಳವಡಿಸಿ ತರಬಹುದಾಗಿತ್ತು. ಹೀಗೆ ಹಾಲಿ ಇರತಕ್ಕ ಇನಾಂ ಅಬಾಲಿಷನ್ ಶಾಸನಕ್ಕೆ ಒಂದು ತಿದ್ದುಪಡಿ ಮಾಡುವುದರ ಮೂಲಕವಾಗಲಿ, ಇಲ್ಲವೇ ಸಮಗ್ರ ಭೂಸುಧಾರಣೆಯ ಮಸೂದೆಯಲ್ಲಾಗಲೀ ಇದನ್ನು ಅಳವಡಿಸಿ ಮಾಡಬಹುದಾಗಿತ್ತು. ಅಂಥಾ ಅವಕಾಶವನ್ನೆಲ್ಲಾ ಕೈ ಬಿಟ್ಟು ಮಾನ್ಯ ಮಂತ್ರಿಗಳು ಇದನ್ನು ತಂದಿರುವುದನ್ನು ನೋಡಿದರೆ ಏನೋ ಒಂದು ಪ್ರಶಸ್ತಿಯನ್ನು ಪಡೆಯಬೇಕೆಂಬ ಉದ್ದೇಶದಿಂದ ಇದನ್ನು ತಂದಿರುವಂತೆ ಭಾಸವಾಗುತ್ತಿದೆ.